# ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಓ ಎಸ್ ನಂ.462–2016** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಜ್ಯೋತಿ.ಸಿ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 04–03–2022. |

**ಪಾಟೀ ಸವಾಲುಃ  ಶ್ರೀ ಎನ್.ಎಸ್ ವಕೀಲರಿಂದಃ**

ನಾನು ಹಾಗೂ ನನ್ನ ತಮ್ಮ ಪ್ರತಿವಾದಿಗಳ ವಿರುದ್ಧ ದಾವೆ ಹೂಡಿದ್ದೇವೆ. ಪಾರ್ವತಮ್ಮ ನನ್ನ ತಾಯಿ. ನಾವು ನನ್ನ ತಂದೆಯ ಮೊದಲನೆ ಹೆಂಡತಿ ಹಾಗೂ ಅವರ ಮನಗ ವಿರುದ್ಧ ಆಸ್ತಿಯಲ್ಲಿ ಭಾಗಾಂಶ ಕೋರಿ ಈ ದಾವೆ ಹೂಡಿದ್ದೇವೆ. ನಾವು ಒಂದು ಸೈಟು ಹಾಗೂ ಒಂದು ಮನೆ ಮೇಲೆ ಭಾಗ ಕೋರಿ ಈ ದಾವೆ ಹೂಡಿದ್ದೇವೆ. ದಾವಾ ಸ್ವತ್ತುಗಳು ನಮ್ಮ ತಾತನ ಆಸ್ತಿ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಈಗಾಗಲೇ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ.  ದಾವಾ ಆಸ್ತಿಗಳ ಜಂಜರ್ ನಂಬರ್ ಅನ್ನು ನಾನು ದಾವಾ ಷೆಡ್ಯೂಲ್ ನಲ್ಲಿ ಹೇಳಿ ಬರೆಸಿದ್ದೇನೆ. ನಾನು ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿದೇ ಇರುವುದರಿಂದ ನಾನು ದಾವೆಯಲ್ಲಿ ಕೋರಿರುವ ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**